**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 121(134) |
| ಮಾನ್ಯ ಸದಸ್ಯರ ಹೆಸರು | : | ಡಾ:ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇರುವ ದೃಶ್ಯ ಕಲಾ ವಿಭಾಗ ಈಗ ಮೂಲಸೌಕರ್ಯ ಇಲ್ಲದೆ ಖಾಯಂ ಪ್ರಾಧ್ಯಾಪಕರಿಲ್ಲದೆ ಸೊರಗುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| (ಆ) | ವ್ಯಾಪಕ ಉದ್ಯೋಗ ಸೃಷ್ಟಿಸುವ ಈ ಕೋರ್ಸಿಗೆ ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಬೇಡಿಕೆಗೆ ತಕ್ಕಂತೆ ಮೂಲಸೌಕರ್ಯಗಳು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಸಂಕಷ್ಟ ತಂದಿರುವುದು ನಿಜವೇ; | ಪ್ರಾರಂಭದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿ.ಜಿ ಡಿಪ್ಲೊಮಾ ಕೋರ್ಸುಗಳು ಅಸ್ತಿತ್ವದಲ್ಲಿದ್ದು, 2009ನೇ ಸಾಲಿನಿಂದ ಎಂ.ವಿ.ಎ. (ಮಾಸ್ಟರ್ ಆಫ್ ವಿಷುಯಲ್ ಆರ್ಟ್ಸ್) ಕೋರ್ಸನ್ನು ಮಾತ್ರ ನಡೆಸಲಾಗುತ್ತಿದೆ. ಪ್ರಸ್ತುತ ಎಂ.ವಿ.ಎ ಕೋರ್ಸಿನಲ್ಲಿ 1) ಪೈಂಟಿಂಗ್ 2) ಪ್ರಿಂಟ್ ಮೇಕಿಂಗ್ 3) ಸ್ಕಲ್ಪ್ಚರ್ ವಿಶೇಷತೆಗಳು ಇರುತ್ತವೆ. ಪ್ರವೇಶಕ್ಕೆ ಬೇಡಿಕೆ ಇರುತ್ತದೆ.<br><br>2006ರಲ್ಲಿ ವಿಶ್ವವಿದ್ಯಾಲಯವು ಹೊಸದಾಗಿ ಸ್ಥಾಪಿಸಲಾದ ದೃಶ್ಯ ಕಲಾ ವಿಭಾಗವು ಸೇರಿದಂತೆ ಇನ್ನಿತರ ವಿಭಾಗಗಳ ಶಿಕ್ಷಕರ ಹುದ್ದೆಗೆ ಹೆಚ್ಚುವರಿ ಕಾರ್ಯಭಾರವಿರದ ಇತರ ವಿಭಾಗಗಳಲ್ಲಿನ ಹುದ್ದೆಗಳನ್ನು ನೂತನ ವಿಭಾಗಗಳಿಗೆ ವರ್ಗಾಯಿಸಿ, 2007ರಲ್ಲಿ ಒಂದು ಪ್ರಾಧ್ಯಾಪಕರ ಹುದ್ದೆಯನ್ನು ನೇರ ನೇಮಕಾತಿಯಡಿಯಲ್ಲಿ ಭರ್ತಿ ಮಾಡಲಾಗಿತ್ತು. ಈ ಪ್ರಾಧ್ಯಾಪಕರು ಜೂನ್ 2022ರಲ್ಲಿ ನಿವೃತ್ತಿ ಹೊಂದಿರುತ್ತಾರೆ.<br><br>ಡೀನರು, ಕಲಾ ನಿಕಾಯ ಇವರು ಪ್ರಸ್ತುತ ಈ ವಿಭಾಗದ ಅಧ್ಯಕ್ಷರಾಗಿದ್ದು, 11 ಜನ ಅತಿಥಿ ಉಪನ್ಯಾಸಕರು ಕಾರ್ಯನಿವಹಿಸುತ್ತಿದ್ದು, ಈ ವಿಭಾಗದಲ್ಲಿ ಕಾರ್ಯಭಾರವನ್ನು ಸರಿದೂಗಿಸಲಾಗಿರುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗಿರುವುದಿಲ್ಲ. |

| | | |
|---|---|---|
| (ಇ) | ಕಳೆದ 2004 ರಿಂದ ಇಲ್ಲಿಯವರೆಗೂ ಎಷ್ಟು ವಿದ್ಯಾರ್ಥಿಗಳು ಈ ಕೋರ್ಸುಗಳನ್ನು ಪೂರ್ಣಗೊಳಿಸಿದ್ದಾರೆ ಹಾಗೂ ಪ್ರಸ್ತುತ ಎಷ್ಟು ಸೀಟುಗಳ ಬೇಡಿಕೆಗಳಿವೆ; | ಕಳೆದ 2004 ರಿಂದ ಇಲ್ಲಿಯವರೆಗೂ ಸ್ನಾತಕೋತ್ತರ ಪದವಿಯಲ್ಲಿ ಒಟ್ಟು 623 ಮತ್ತು ಪಿ.ಜಿ ಡಿಪ್ಲೊಮಾ ಕೋರ್ಸಿನಲ್ಲಿ ಒಟ್ಟು 47 ವಿದ್ಯಾರ್ಥಿಗಳು ಕೋರ್ಸನ್ನು ಪೂರ್ಣಗೊಳಿಸಿರುತ್ತಾರೆ.<br><br>ವಾರ್ಷಿಕವಾಗಿ 60 ರಿಂದ 70 ಅಭ್ಯರ್ಥಿಗಳಿಂದ ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಕೆಯಾಗುತ್ತಿದ್ದು, ಕೋರ್ಸಿಗೆ ಬೇಡಿಕೆ ಇರುತ್ತದೆ. |
| (ಈ) | ಪ್ರಸ್ತುತ ಎಷ್ಟು ಬೋಧಕರು ಮತ್ತು ಬೋಧಕೇತರ ಇನ್ನಿತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಎಷ್ಟು ಹುದ್ದೆಗಳು ಖಾಲಿ ಇವೆ. ದೃಶ್ಯ ಕಲೆ ವಿಭಾಗದಲ್ಲಿ ಯಾವ ಯಾವ ವಿಷಯಗಳನ್ನು ಬೋಧಿಸಲಾಗುವುದು. ಈ ಕೋರ್ಸಿನ ಅವಧಿ ಎಷ್ಟು ವರ್ಷಗಳು? | ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗದಲ್ಲಿ ಪ್ರಸ್ತುತ ಒಟ್ಟು 03 ಬೋಧಕೇತರ ನೌಕರರುಗಳು ಹಾಗೂ 11 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ವಿವರ ಕೆಳಕಂಡಂತಿದೆ:<br><br>• ಸಹಾಯಕರು (ಖಾಯಂ)-01<br>• ದತ್ತಾಂಶ ನಮೂದಕರು (ಹೊರಗುತ್ತಿಗೆ)-01<br>• ಗ್ರೂಪ್-'ಡಿ' (ದಿನಗೂಲಿ)- 01<br>• ಅತಿಥಿ ಉಪನ್ಯಾಸಕರು-11<br><br>ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗದಲ್ಲಿ ಇದುವರೆವಿಗೂ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ಆದ್ದರಿಂದ ಹುದ್ದೆ ಖಾಲಿ ಇರುವುದಿಲ್ಲ. ದೃಶ್ಯ ಕಲಾ ವಿಭಾಗವನ್ನು ಸೃಜಿಸುವ ಪರಿನಿಯಮವು ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಪರಿನಿಯಮದಂತೆ ದೃಶ್ಯ ಕಲಾ ವಿಭಾಗಕ್ಕೆ ಈ ಕೆಳಕಂಡ ಬೋಧಕ ಹುದ್ದೆಗಳ ಸೃಜನೆಗೆ ಪ್ರಸ್ತಾಪಿಸಲಾಗಿರುತ್ತದೆ.<br><br>ಅ) ಪ್ರಾಧ್ಯಾಪಕರು:01<br>ಆ) ಸಹ ಪ್ರಾಧ್ಯಾಪಕರು(ರೀಡರ್):02<br>ಇ) ಸಹಾಯಕ ಪ್ರಾಧ್ಯಾಪಕರು(ಲೆಕ್ಚರರ್):03<br><br>ಜುಲೈ 2023 ರಿಂದ ಬೆಂಗಳೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನರನ್ನು ಈ ವಿಭಾಗದ ಅಧ್ಯಕ್ಷರನ್ನಾಗಿ ಹೆಚ್ಚುವರಿ ಕಾರ್ಯಭಾರದಲ್ಲಿ ನೇಮಿಸಲಾಗಿದ್ದು, ಇವರು ವಿಭಾಗದ ಮೇಲುಸ್ತುವಾರಿ ನಿರ್ವಹಣೆಯನ್ನು ನಡೆಸುತ್ತಿರುತ್ತಾರೆ.<br><br>ಪ್ರಸ್ತುತ ವಿಭಾಗದಲ್ಲಿ ಎಂ.ವಿ.ಎ. (ಮಾಸ್ಟರ್ ಆಫ್ ವಿಷುಯಲ್ ಆರ್ಟ್ಸ್) ಕೋರ್ಸನ್ನು ನಡೆಸಲಾಗುತ್ತಿದೆ. ಪ್ರಸ್ತುತ ಇದರಲ್ಲಿ 1) ಪೈಂಟಿಂಗ್ 2) ಪ್ರಿಂಟ್ ಮೇಕಿಂಗ್ 3)ಸ್ಕಲ್ಪ್ಚರ್ ವಿಶೇಷತೆಗಳನ್ನು ಬೋಧಿಸಲಾಗುತ್ತಿದೆ. ಕೋರ್ಸಿನ ಅವಧಿಯು 02 ವರ್ಷಗಳಾಗಿರುತ್ತದೆ. |

ಸಂಖ್ಯೆ: ಇಡಿ 369 ಯುಬಿವಿ 2026

(ಬಸವರಾಜ ರಾಯರೆಡ್ಡಿ)
ಉನ್ನತ ಶಿಕ್ಷಣ ಸಚಿವರು